ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 04-07-2017

## ಪತ್ರಿಕಾ ಆಮಂತ್ರಣ

1. 46ನೇ ವಾರ್ಷಿಕ ಕಲಾ ಪ್ರದರ್ಶನ:

ಉದ್ಘಾಟನೆ:
ಪ್ರೊ. ಎಸ್.ಜಿ. ಸಿದ್ಧರಾಮಯ್ಯ,
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ,

ಮುಖ್ಯ ಅತಿಥಿ:
ಡಾ: ಸಿ.ಎನ್. ಮಂಜುನಾಥ,
ನಿರ್ದೇಶಕರು, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ತಳಮಹಡಿ 1 ಮತ್ತು 2, ಕುಮಾರಕೃಪ ರಸ್ತೆ, ಬೆಂಗಳೂರು
ದಿನಾಂಕ: 05-7-2017 ಬುಧವಾರ ಬೆಳಿಗ್ಗೆ 11-00 ಗಂಟೆಗೆ

**2. ಕೇಂದ್ರ ಸರ್ಕಾರದ ಎಂ.ಎಸ್.ಎಂ.ಇ ಪ್ರಶಸ್ತಿ ವಿಜೇತರಿಗೆ ಅಭಿನಂದನಾ ಕಾರ್ಯಕ್ರಮ:**

**<u>ಅಭಿನಂದನೆ:</u>**
**ಶ್ರೀ ದರ್ಪಣ್ ಜೈನ್, ಆಯುಕ್ತರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.**

**ದಿನಾಂಕ: 05-07-2017, ಬುಧವಾರ, ಸಮಯ : ಮಧ್ಯಾಹ್ನ 12.30 ಗಂಟೆಗೆ**
**ಸ್ಥಳ: ಕರ್ನಾಟಕ ಉದ್ಯೋಗ ಕಚೇರಿ ಸಭಾಂಗಣ, ನಂ. 49, ಮೂರನೇ ಮಹಡಿ, ಖನಿಜ ಭವನ, (ಪೂರ್ವ ವಿಭಾಗ) ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560 001.**

3. ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭ-2017

ಗೌರವ ಪ್ರಶಸ್ತಿ ಪ್ರದಾನ:
ಶ್ರೀಮತಿ ಉಮಾಶ್ರೀ,
ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಿರಿಯ ನಾಗರಿಕರ ಸಬಲೀಕರಣ ಸಚಿವರು

ಮುಖ್ಯ ಅತಿಥಿಗಳು:
ಅನಂತಕುಮಾರ್,
ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಕೆ.ಜೆ. ಜಾರ್ಜ್,
ಬೆಂಗಳೂರು ನಗರಾಭಿವೃದ್ಧಿ ಸಚಿವರು

ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಂಗಳೂರು
ದಿನಾಂಕ: 05-07-2017 ಬುಧವಾರ ಸಂಜೆ 6-00 ಗಂಟೆಗೆ

## ಪತ್ರಿಕಾ ಪ್ರಕಟಣೆ

## ನವೋದ್ಯಮ ಸ್ಥಾಪನೆಗೆ ಆರ್ಥಿಕ ನೆರವು ನೀಡುವುದರ ಜೊತೆಗೆ ತಂತ್ರಜ್ಞಾನ ಮತ್ತು ವ್ಯಾಪಾರ ಸಂಬಂಧ ಪ್ರೋತ್ಸಾಹ ನೀಡಲು ಸಿದ್ದ : ಸಚಿವ ಪ್ರಿಯಾಂಕ್ ಖರ್ಗೆ

ಬೆಂಗಳೂರು, ಜುಲೈ 4 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ನವೋದ್ಯಮ (ಸ್ಟಾರ್ಟ್ ಅಪ್)ಗಳಿಗೆ ವಿಫಲ ಅವಕಾಶಗಳಿದ್ದು ಇದೇ ತಿಂಗಳ 18 ರ ಒಳಗಾಗಿ ವಿಭಾಗ ಮಟ್ಟದಲ್ಲಿ ನೊಂದಣಿ ಪ್ರಕ್ರಿಯೆಗೆ ಅವಕಾಶ ಕಲ್ಪಿಸಲಾಗಿದ್ದು ಒಟ್ಟಾರೆ 250 ನವೋದ್ಯಮಗಳನ್ನು ಆಯ್ಕೆಮಾಡಿದ ನಂತರ ರಾಜಧಾನಿ ಮಟ್ಟದಲ್ಲಿ 100 ನವೋದ್ಯಮಿಗಳನ್ನು ಆಯ್ಕೆಮಾಡಿ ಅವರಿಗೆ ಎಲ್ಲಾ ರೀತಿಯ ನೆರವನ್ನು ನೀಡಲಾಗುವುದು

ಎಂದು ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಮತ್ತು ಪ್ರವಾಸೋದ್ಯಮ ಸಚಿವ ಪ್ರಿಯಾಂಕ್ ಖರ್ಗೆ ಅವರು ತಿಳಿಸಿದರು.

ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಇಂದು ಇಲಾಖೆಯ ಸ್ಟಾರ್ಟ್ ಆಪ್‌ಗೆ ಉತ್ತೇಜನ ನೀಡುವ ಹೊಸ ಎಲಿವೇಟೆಡ್ ವೆಬ್‌ಸೈಟ್ ಹಾಗೂ ಲೋಗೋವನ್ನು ಅನಾವರಣಗೊಳಿಸಿ ಮಾತನಾಡಿದ ಅವರು ಈಗಾಗಲೇ ಎಲಿವೇಟೆಡ್ 100 ಎಂಬ ಯೋಜನೆಯಡಿ 100 ಅತ್ಯುತ್ತಮ ಅವಿಷ್ಕಾರ ನವೋದ್ಯಮಿಗಳನ್ನು ಗುರುತಿಸುವ ಮೂಲಕ ಮುಂದಿನ ಹಂತದಲ್ಲಿ ಯಶಸ್ಸು ಸಾಧಿಸಲು ಅನುಕೂಲ ಮಾಡಿಕೊಡುವ ಉದ್ದೇಶವನ್ನು ನಮ್ಮ ಸರ್ಕಾರ ಹೊಂದಿದೆ ಎಂದು ತಿಳಿಸಿದರು.

ಈ ನೂತನ ಯೋಜನೆಗೆ ರಾಜ್ಯ ಸರ್ಕಾರ 400 ಕೋಟಿ ರೂ. ಅನುದಾನವನ್ನು ಮೀಸಲಿರಿಸಿದ್ದು ದೇಶದಲ್ಲಿಯೇ ಸ್ಟಾರ್ಟ್ ಅಪ್ ಯೋಜನೆಯನ್ನು ಯಶಸ್ವಿಗೊಳಿಸಿದ ಕೀರ್ತಿ ಕರ್ನಾಟಕ ರಾಜ್ಯ ಸರ್ಕಾರದ್ದಾಗಿದೆ. ನವೋದ್ಯಮಿಗಳು ಯಶಸ್ವಿಯಾಗಿ ಸ್ವಂತ ಬಲದಿಂದ ಅಭಿವೃದ್ಧಿ ಹೊಂದಬೇಕು ಎಂಬ ದೃಷ್ಟಿಯಿಂದ ಸರ್ಕಾರ ಮಹತ್ವದ ನಿರ್ಧಾರವನ್ನು ಕೈಗೊಂಡಿದೆ. ಸ್ಟಾರ್ಟ್ ಅಪ್‌ಗಳಿಗೆ ಬೆಂಗಳೂರು ಅತ್ಯಂತ ಪ್ರಾಶಸ್ತ್ಯ ಹೊಂದಿರುವ ಸ್ಥಳವಾಗಿದೆ. ಇದಕ್ಕೆ ಪೂರಕ ವಾತಾವರಣವಿರುವುದಿರಂದ ಜಗತ್ತಿನಲ್ಲಿಯೇ ಅತ್ಯಂತ ಕ್ರಿಯಾತ್ಮಕ ನಗರವೆಂದು ಪರಿಗಣಿಸಲಾಗಿದೆ. ನವೋದ್ಯಮಿಗಳಿಗೆ ಕರ್ನಾಟಕ ಜಾಗತಿಕ ಕೇಂದ್ರವನ್ನಾಗಿ ರೂಪಿಸುವ ಬಗ್ಗೆ ಈಗಾಗಲೇ ರಾಜ್ಯ ಸರ್ಕಾರ ನೀಡಿರುವ ಭರವಸೆಯನ್ನು ಈಡೇರಿಸುವತ್ತ ಹೆಜ್ಜೆ ಇಟ್ಟಿದೆ ಎಂದು ಹೇಳಿದರು.

ಇದುವರೆಗೆ 46 ಸ್ಟಾರ್ಟ್ ಅಪ್‌ಗಳನ್ನು ಗುರುತಿಸಿ 15.68 ಕೋಟಿ ರೂ ಅನುದಾನವನ್ನು ಮಂಜೂರು ಮಾಡಲಾಗಿದೆ, ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ 26 ಸ್ಟಾರ್ಟ್ ಅಪ್‌ಗಳಿಗೆ 10.70 ಕೋಟಿ ರೂ ಹಾಗೂ ಪ್ರವಾಸೋದ್ಯಮ ವಲಯದಲ್ಲಿ 8 ಘಟಕಗಳಿಗೆ 1.80 ಕೋಟಿ ರೂ. ಅಲ್ಲದೆ ಮಾಹಿತಿ ತಂತ್ರಜ್ಞಾನ ವಲಯದಲ್ಲಿ 12 ನವೋದ್ಯಮಿಗಳಿಗೆ 3.18 ಕೋಟಿ ರೂ. ಮಂಜೂರು ಮಾಡಿದೆ.

ರಾಜ್ಯ ಸರ್ಕಾರ ನವೋದ್ಯಮಿಗಳಿಗೆ ಕೇವಲ ಅನುದಾನವನ್ನಷ್ಟೇ ನೀಡುತ್ತಿಲ್ಲ, ಅಗತ್ಯವಾದ ತಾಂತ್ರಿಕ ಹಾಗೂ ವ್ಯಾಪಾರ ಸಂಬಂಧಿ ಪ್ರೋತ್ಸಾಹವನ್ನು ರಾಜ್ಯ ಸರ್ಕಾರ ನೀಡುತ್ತಿದೆ. 2020 ರ ವೇಳೆಗೆ ರಾಜ್ಯದಲ್ಲಿ ಸ್ಟಾರ್ಟ್ ಅಪ್ ನೀತಿ ಅನ್ವಯ 20 ಸಾವಿರ ನವೋದ್ಯಮಿಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಎಸ್‌ಎಂ:ಕೆಪಿಪಿ:ಜೆಡಿ:ಜಿಪಿಆರ್

## ಯಕ್ಷಗಾನ ಮತ್ತು ಬಯಲಾಟ ತರಬೇತಿ ಶಿಬಿರ – ಹಿರಿಯ ಕಲಾವಿದರಿಂದ ಅರ್ಜಿ ಆಹ್ವಾನ

ಬೆಂಗಳೂರು, ಜುಲೈ 4 (ಕರ್ನಾಟಕ ವಾರ್ತೆ)

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ 2017-18 ನೇ ಸಾಲಿನ ವಿಶೇಷ ಘಟಕ ಯೋಜನೆ ಪರಿಶಿಷ್ಟ ವರ್ಗದ ಮತ್ತು ಗಿರಿಜನ ಉಪಯೋಜನೆಯಡಿ ಯಕ್ಷಗಾನ ಮತ್ತು ಬಯಲಾಟ ಕಲೆಗಳಲ್ಲಿ ಸಾಧನೆ ಮಾಡಿದ ಪರಿಶಿಷ್ಟ ಪಂಗಡದ ಹಿರಿಯ ಕಲಾವಿದರಿಂದ ಅರ್ಜಿ ಆಹ್ವಾನಿಸಿದೆ.

ಅಕಾಡೆಮಿ ಯಕ್ಷಗಾನ ಮತ್ತು ಬಯಲಾಟ ಕಲಾಶಿಬಿರಗಳನ್ನು ನಡೆಸಲು ಉದ್ದೇಶಿಸಿದ್ದು ಯಕ್ಷಗಾನ ಮತ್ತು ಬಯಲಾಟ ಕಲಾಪ್ರಕಾರಗಳಲ್ಲಿ (ತೆಂಕುತಿಟ್ಟು/ಬಡಗುತಿಟ್ಟು ಯಕ್ಷಗಾನ, ಮೂಡಲಪಾಯ ಯಕ್ಷಗಾನ, ಶ್ರೀಕೃಷ್ಣಪಾರಿಜಾತ, ದೊಡ್ಡಾಟ ಸಣ್ಣಾಟ, ಘಟ್ಟದಕೋರೆ, ತೊಗಲುಗೊಂಬೆಯಾಟ, ಸೂತ್ರದಗೊಂಬೆಯಾಟ, ಸಲಾಕೆಗೊಂಬೆಯಾಟ) ತರಬೇತಿ ನೀಡಬಯಸುವ ಪರಿಶಿಷ್ಟ ಪಂಗಡದ ಹಿರಿಯ ಕಲಾವಿದರಿಂದ ಅರ್ಜಿ ಆಹ್ವಾನಿಸಿದೆ.

ಅರ್ಜಿ ನಮೂನೆ ಪ್ರತಿಯನ್ನು ಆಯಾ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಿಂದ ಪಡೆದು, ಭರ್ತಿಮಾಡಿದ ಅರ್ಜಿಯನ್ನು ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಕನ್ನಡ ಭವನ, ಎರಡನೇ ಮಹಡಿ, ಚಾಲುಕ್ಯ ವಿಭಾಗ, ಜೆ.ಸಿ.ರಸ್ತೆ, ಬೆಂಗಳೂರು - 560 002 ಇವರಿಗೆ ಕಳಹಿಸಿಕೊಡಬಹುದಾಗಿದೆ..

ಅರ್ಜಿ ಸಲ್ಲಿಸಲು ಜುಲೈ 21 ಕೊನೆಯ ದಿನವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ 080- 22113146 ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## <u>ಗಾಂಧಿ ವಿಚಾರ ಸಂಸ್ಕಾರ ಪರೀಕ್ಷೆ 2017-18</u>

ಬೆಂಗಳೂರು, ಜುಲೈ 4 (ಕರ್ನಾಟಕ ವಾರ್ತೆ)

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಸಂಯುಕ್ತಾಶ್ರಯದಲ್ಲಿ ವಿದ್ಯಾರ್ಥಿಗಳಿಗಾಗಿ ಗಾಂಧಿ ವಿಚಾರ ಸಂಸ್ಕಾರ ಪರೀಕ್ಷೆಗೆ ಅರ್ಜಿ ಆಹ್ವಾನಿಸಿದೆ.

ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ವಿದ್ಯಾರ್ಥಿಗಳಿಗಾಗಿ ಒಂದು ಹಂತದಲ್ಲಿ ಮತ್ತು ಪದವಿ ವಿದ್ಯಾರ್ಥಿಗಳಿಗಾಗಿ ಮತ್ತೊಂದು ಹಂತದಲ್ಲಿ ಈ ಪರೀಕ್ಷೆಯನ್ನು ನಡೆಸಲಾಗುವುದು.

ವಿದ್ಯಾರ್ಥಿಗಳ ತರಗತಿಗೆ ಅನುಗುಣವಾಗಿ ಪುಸ್ತಕಗಳನ್ನು ಒದಗಿಸಲಾಗುವುದು. ಪ್ರಾಥಮಿಕ ವಿಭಾಗಕ್ಕೆ 20 ರೂ, ಪ್ರೌಢಶಾಲೆ ಮತ್ತು ಪದವಿ ಪೂರ್ವ ವಿಭಾಗಕ್ಕೆ 40 ರೂ ಹಾಗೂ ಪದವಿ ವಿಭಾಗಕ್ಕೆ 45 ರೂ ಮತ್ತು ಸ್ನಾತಕೋತ್ತರ ಹಾಗೂ ಸಾರ್ವಜನಿಕರಿಗೆ 70 ರೂ. ಗಳಂತೆ ನಿಗಧಿಪಡಿಸಲಾಗಿದೆ.

ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ www.gandhifoundtion.net ಅನ್ನು ನೋಡಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ರಾಜ್ಯ ಸಂಯೋಜಕರಾದ ಡಾ. ಅಬೀದ ಬೇಗಮ್ – 9035912903 ಮತ್ತು ಈ. ಬಸವರಾಜು 9448957666 ಅವರನ್ನು ಸಂಪರ್ಕಿಸಬಹುದಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್.

# ಸಾವಯವ ಮತ್ತು ಸಿರಿಧಾನ್ಯ ಮೇಳ

ಬೆಂಗಳೂರು, ಜುಲೈ 4 (ಕರ್ನಾಟಕ ವಾರ್ತೆ)

ಬೆಂಗಳೂರು ಕೃಷಿ ಇಲಾಖೆ ಹಾಗೂ ಜೈವಿಕ ಕೃಷಿಕ ಸೊಸೈಟಿ ಸಂಯುಕ್ತಾಶ್ರಯದಲ್ಲಿ ಸಾವಯವ ಕೃಷಿ ಹಾಗೂ ಸಿರಿಧಾನ್ಯಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಜುಲೈ 8 ಮತ್ತು 9 ರಂದು ನಾಗರಭಾವಿ ಸರ್ಕಲ್ ಹತ್ತಿರದ ಮೈದಾನದಲ್ಲಿ ಸಾವಯವ ಮತ್ತು ಸಿರಿಧಾನ್ಯ ಮೇಳವನ್ನು ಹಮ್ಮಿಕೊಂಡಿದೆ.

ಸಾವಯವ ಹಾಗೂ ಸಿರಿಧಾನ್ಯಗಳ ಬಗ್ಗೆ ಗ್ರಾಹಕರಲ್ಲಿ ಅರಿವು ಮೂಡಿಸುವುದು ಈ ಮೇಳದ ಮುಖ್ಯ ಉದ್ದೇಶವಾಗಿರುತ್ತದೆ. ಬೆಂಗಳೂರು ಸೇರಿದಂತೆ ಅಕ್ಕಪಕ್ಕದ ಜಿಲ್ಲೆಗಳು ಹಾಗೂ ರಾಜ್ಯಾದ್ಯಂತ ಸಾವಯವ ಉತ್ಪನ್ನಗಳ ಹಾಗೂ ಸಿರಿಧಾನ್ಯಗಳ ಮಾರಾಟದಲ್ಲಿ ತೊಡಗಿರುವ ಸಂಘ ಸಂಸ್ಥೆಗಳು ಹಾಗೂ ಮಾರಾಟಗಾರರು ಭಾಗವಹಿಸಲಿದ್ದಾರೆ.

ಎಸ್‌ಎಂ:ಜೆಡಿ:ಜಿಪಿಆರ್.

## ಸ್ನಾತಕೋತ್ತರ ಕೋರ್ಸುಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು, ಜುಲೈ 4 (ಕರ್ನಾಟಕ ವಾರ್ತೆ)

ಶ್ರೀಮತಿ ವಿ.ಹೆಚ್.ಡಿ ಕೇಂದ್ರೀಯ ಗೃಹ ವಿಜ್ಞಾನ ಕಾಲೇಜು 2017–18ನೇ ಸಾಲಿನ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

M.sc. ಗೃಹ ವಿಜ್ಞಾನ ವಿಷಯದಲ್ಲಿ M.sc. in Human Development, M.Sc in Resourse Management, M.Sc. in Food and Nutrition, M.Sc in Textiles and Clothing, M.Sc in Extension Education and Communication, M.Sc in Early Childhood Education and Administration and M.Sc in Interior Design and Decoration. ಹಾಗೂ ಎಂ.ಎ. ಸಮಾಜ ಶಾಸ್ತ್ರ ವಿಷಯಕ್ಕಾಗಿ ಅರ್ಜಿ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿಗಾಗಿ ಕಾಲೇಜಿನ ವೆಬ್‌ಸೈಟ್ www.gfgc.kar.nic.in/vhdhomesscience ಅನ್ನು ವೀಕ್ಷಿಸಬಹುದಾಗಿದೆ ಇಮೇಲ್ Email: vhdadm@gmail.com. ಅರ್ಜಿ ಸಲ್ಲಿಸಲು ಜುಲೈ 25 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080 – 22200233 ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## 65 ಎಂ.ಎಲ್.ಡಿ. ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಲೋಕಾರ್ಪಣೆ

ಬೆಂಗಳೂರು, ಜುಲೈ 4 (ಕರ್ನಾಟಕ ವಾರ್ತೆ)

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನಗರದ ಚಿಕ್ಕಬಾಣಾವರ, ನಾಗಸಂದ್ರ ಹಾಗೂ ರಾಜಾ ಕೆನಾಲ್‌ನಲ್ಲಿ ಹೊಸದಾಗಿ ನಿರ್ಮಿಸಿರುವ ಒಟ್ಟು 65 ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಲೋಕಾರ್ಪಣಾ ಸಮಾರಂಭವನ್ನು ಜುಲೈ 7 ರಂದು ಬೆಳಿಗ್ಗೆ 11.00 ಗಂಟೆಗೆ ರಾಜಾಕೆನಾಲ್ ಎಸ್‌ಟಿಪಿ ಆವರಣ, ಬೆಂಗಳೂರು

ಜಲಮಂಡಲಿ, ಫುಡ್ ವರ್ಲ್ಡ್ ಎದುರು, ಗೆದ್ದಲಹಳ್ಳಿ, ಕೊತ್ತನೂರು, ಬೆಂಗಳೂರು ಇಲ್ಲಿ ಹಮ್ಮಿಕೊಂಡಿದೆ.

ಈ ಸಮಾರಂಭದ ಉದ್ಘಾಟನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೆರವೇರಿಸಲಿದ್ದಾರೆ. ಎಂಬಿಸಿ ಆಫ್ ಜಪಾನ್‌ನ ಘನತೆವೆತ್ತ ಕೆಂಜಿ ಇರಾಮಟ್ಸು ಅವರು ಉಪಸ್ಥಿತರಿರುವರು.

ಸಮಾರಂಭ ಅಧ್ಯಕ್ಷತೆಯನ್ನು ಕೆ.ಆರ್. ಪುರಂ ವಿಧಾನಸಭಾ ಕ್ಷೇತ್ರದ ಶಾಸಕ ಬಿ.ಎ. ಬಸವರಾಜು ಅವರು ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಕೇಂದ್ರದ ಸಚಿವರು, ರಾಜ್ಯ ಸಚಿವ ಸಂಪುಟದ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿರುವರು.

ಎಸ್‌ಎಂ:ಜೆಡಿ:ಜಿಪಿಆರ್.

## 2017 ನೇ ಕ್ಯಾಲೆಂಡರ್‌ನ " ಡಿಜಿಟಲ್ ಅಪ್ಲಿಕೇಷನ್ ' ಅಭಿವೃದ್ಧಿ

ಬೆಂಗಳೂರು, ಜುಲೈ 4 (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರದ 2017 ನೇ ಸಾಲಿನ ಕ್ಯಾಲೆಂಡರ್‌ನ "ಡಿಜಿಟಲ್ ಅಪ್ಲಿಕೇಷನ್' ಅನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ಆ್ಯಪ್ ಮೂಲಕ 2017 ನೇ ಸಾಲಿನ 12 ತಿಂಗಳುಗಳ ದಿನಾಂಕ/ವಾರಗಳ ಪಟ್ಟಿ, ಸಾರ್ವತ್ರಿಕ, ನಿರ್ಬಂಧಿತ ರಜಾ ದಿನಗಳು, ವಿಶೇಷ ದಿನಾಚರಣೆಗಳು, ಅಮಾವಾಸ್ಯೆ ಹಾಗೂ ಹುಣ್ಣಿಮೆ ಇತ್ಯಾದಿ ವಿವರಗಳನ್ನು ಯಾವುದೇ ಸ್ಥಳದಲ್ಲಿ ಹಾಗೂ ಯಾವುದೇ ವೇಳೆಯಲ್ಲಿಯೂ ಅಂಗೈನಲ್ಲಿ ಪಡೆಯಬಹುದಾಗಿದೆ.

ಸದರಿ ' ಡಿಜಿಟಲ್ ಅಪ್ಲಿಕೇಷನ್ ' ಅನ್ನು Android Mobile Phone ಗಳಿಗೆ Google Playstore ಮೂಲಕ ಡೌನ್‌ಲೋಡ್ ಮಾಡಿಕೊಂಡು ಇದರ ಸುದುಪಯೋಗವನ್ನು ಸರ್ಕಾರಿ ಅಧಿಕಾರಿಗಳು/ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಪಡೆಯಬಹುದಾಗಿದೆ ಎಂದು ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

"Digital Application"

**Bengaluru, July 4(Karnataka Information)**

**"Digital Application" for Karnataka Government Calenders 2017 has been Developed and launched. Through this App any one can get the entire information of 12 months/Date/Days of the year 2017. Details of General holidays, Restricted holidays other Special days and also inforamtion regarding Amavasya and Full moon Day is also available.**

**Once this App is downloaded any one can access these inforamtion at any place and at any time on hand. The Government Officials/Staff and General public may make use of this facility by downloading the Digital Application to Android Mobile Phone through Google Playstore says press release issued by Director, Department of Printing, Stationery and Publications.**